**Code No. 16 Z**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರವೀಣ ದರ್ಜೆ — ತೃತೀಯ ಪತ್ರಿಕೆ

# (ಸಂಕ್ಷೇಪಿಸುವಿಕೆ)

ಜನವರಿ, 2018

ವೇಳೆ { ಉಕ್ತಲೇಖನ : 10 ನಿಮಿಷಗಳು
ವಿಸ್ತರಣೆ : 1 ಗಂಟೆ 30 ನಿಮಿಷಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಮುನ್ನೂರು (300) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.
2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳು ಶೀಘ್ರಲಿಪಿಯನ್ನು ಪರೋಕ್ಷ ವಿಧಾನದಲ್ಲಿ ಸುಮಾರು 1000 ಅಕ್ಷರಗಳಿಗೆ ಲಿಪಿ ಬರಹದಲ್ಲಿ ಸಂಕ್ಷೇಪಿಸಬೇಕೆಂದು ಅಭ್ಯರ್ಥಿಗಳಿಗೆ ಸೂಚನೆ ನೀಡತಕ್ಕದ್ದು

---

ಕರ್ನಾಟಕದ ವಿಧಾನ ಪರಿಷತ್ ಕಲಾಪದಲ್ಲಿ ವಿರೋಧ ಪಕ್ಷದ ನಾಯಕರೊಬ್ಬರು ಕರ್ನಾಟಕ ರಾಜ್ಯದ ಪ್ರಸಕ್ತ ಪರಿಸ್ಥಿತಿಯ ಬಗ್ಗೆ ಈ ಕೆಳಗಿನಂತೆ ಮಾತನಾಡಿದರು.

ಕನ್ನಡ, ಕನ್ನಡಿಗ ಮತ್ತು ಕರ್ನಾಟಕ
$\frac{1}{4}$ ಎಂಬುದು ಭಾ/ಷೆ, ಸಮುದಾಯ ಮತ್ತು
ಪ್ರದೇಶವೊಂದರ ಹೆಗ್ಗುರುತು ಈ ಮೂರೂ
ಬೆಸೆದುಕೊಂಡ ದಿನವೇ ಕರ್ನಾಟಕ
ರಾಜ್ಯೋದಯದ ದಿನ. ಹೀಗಾಗಿ ನವೆಂಬರ್
ಒಂದಕ್ಕೆ ಚಾರಿತ್ರಿಕ ಮಹತ್ವವಿದೆ. ಆದರೆ
$\frac{1}{2}$ ರಾಜ್ಯೋತ್ಸವ ಮನೆ ಮನೆಯ ಹಬ್ಬವಾಗಿಲ್ಲ./
ಭಾಷೆಯ ಕುರಿತ ಅಭಿಮಾನ, ಆತ್ಮವಿಶ್ವಾಸದ
ಕೊರತೆ ಎಲ್ಲೆಡೆ ಕಾಣಿಸುತ್ತಿದೆ. ಕನ್ನಡ ಶಾಲೆಗಳು
ಮುಚ್ಚುತ್ತಿವೆ. ನಗರ, ಪಟ್ಟಣ, ಹಳ್ಳಿಗಳಲ್ಲೂ ಆಂಗ್ಲ
ಮಾಧ್ಯಮ ಶಾಲೆಗಳು ನಾಯಿಕೊಡೆಗಳಂತೆ
$\frac{3}{4}$ ತಲೆಯೆತ್ತುತ್ತಿವೆ. ತಂತ್ರಜ್ಞಾನ/ದ ಒತ್ತಾಸೆಯಿಂದ
ಕನ್ನಡ ಮಾತನಾಡುವ ವಲಯಗಳು
ವಿಸ್ತಾರವಾದಂತೆ ಕಂಡರೂ ಬರಹದ
ಭಾಷೆಯಾಗಿ ಅದು ದಿನೇ ದಿನೇ ಕುಗ್ಗುತ್ತಿದೆ,
ಅನೌಪಚಾರಿಕ ಮಾತುಕತೆಗಳಿಗೆ ಮಾತ್ರ
ಸೀಮಿತಗೊಳ್ಳುತ್ತಿರುವಂತೆ ಕಾಣುತ್ತಿದೆ.
ವಿಜ್ಞಾXನ, ತಂತ್ರಜ್ಞಾನ, ಸಂಶೋಧನೆ, ದೊಡ್ಡ 1
ತಿಳಿವಿನ ವಲಯಗಳಿಗೆ ಕನ್ನಡವನ್ನು ವಿಸ್ತರಿಸುವ,
ಹಾಗೂ ಆಂಗ್ಲ ಭಾಷೆಯಂತೆ ಕನ್ನಡಕ್ಕೂ
ಜಾಗತಿಕ ಸಂಸ್ಕೃತಿ ಮತ್ತು ನಾಗರೀಕತೆಗೆ
ಕೊಡುಗೆ ನೀಡುವ ನುಡಿಯಾಗಿ ರೂಪಿಸಲು
ಆಗುತ್ತಿ/ಲ್ಲ. ಭಾರತದ ಮೂರನೇ ಪ್ರಾಚೀನ $\frac{1}{4}$
ಭಾಷೆಯಾಗಿ, ಜಗತ್ತಿನ ಅತಿ ಪುರಾತನ ಹತ್ತು
ಭಾಷೆಗಳಲ್ಲಿ ಒಂದಾಗಿರುವ, ಸಮೃದ್ಧ ಸಾಹಿತ್ಯ
ಮತ್ತು ಸಾಂಸ್ಕೃತಿಕ ಪರಂಪರೆ ಹೊಂದಿರುವ
ಕನ್ನಡ, ಏಕೆ ಕನ್ನಡಿಗರ ಬದುಕಿನ
ಅಸ್ಮಿತೆಯಾ/ಗಿಲ್ಲ? ಕನ್ನಡ ಕುರಿತು ಕನ್ನಡಿಗರಲ್ಲಿ $\frac{1}{2}$

[ Turn over

ಮನೆ ಮಾಡಿರುವ ಆತ್ಮವಿಶ್ವಾಸದ ಕೊರತೆಗೆ
ಕಾರಣವೇನು ಎಂಬುದರ ಬಗ್ಗೆ ಆಳವಾಗಿ
ಚಿಂತಿಸಬೇಕಾಗಿದೆ.

ಕನ್ನಡ ಎಂಬುದು ನಮ್ಮ ಮಕ್ಕಳ
$\frac{3}{4}$ ಭವಿಷ್ಯವನ್ನು ಬೆಳಗುವುದಿಲ್ಲ. ಅ/ದು
ಉದ್ಯೋಗದ ಭಾಷೆಯಲ್ಲ ಎಂಬ ನಂಬಿಕೆ
ಬೇರೂರಿದೆ. ಭಾಷೆ, ಶಿಕ್ಷಣ, ಜ್ಞಾನ, ಕೌಶಲ್ಯ
ಮತ್ತು ಉದ್ಯೋಗ ಎಂಬುದು ಸುವರ್ಣ
ಚೌಕಟ್ಟು ಎಂದು ಭಾವಿಸಿದ್ದೇವೆ. ಕನ್ನಡದ
ಜಾಗದಲ್ಲಿ ಆಂಗ್ಲ ಭಾಷೆ ಕಲಿತರೆ ಅದರಿಂದ
2 ಯಶಸ್ವಿ ಶಿಕ್ಷಣX ಲಭ್ಯವಾಗುತ್ತದೆ ಜ್ಞಾನವಂತ
ರನ್ನಾಗಿಸುತ್ತದೆ ಕುಶಲಿಗಳನ್ನಾಗಿಸುತ್ತದೆ
ಉದ್ಯೋಗ ಲಭ್ಯವಾಗುತ್ತದೆ. ಇದು ಆರ್ಥಿಕ
ಭದ್ರತೆ ಮತ್ತು ಸೌಖ್ಯಕ್ಕೆ ಹಾದಿ
ಮಾಡಿಕೊಡುತ್ತದೆ ಎಂಬುದನ್ನು ಸತ್ಯವೆಂದೇ
$\frac{1}{4}$ ಭ್ರಮಿಸಿದ್ದೇವೆ. ಇಲ್ಲಿ ಸಾಮಾಜಿಕ/ ಮತ್ತು
ಆರ್ಥಿಕ ಚಲನಶೀಲತೆಯ ವಾಹಕವಾಗಿ ಆಂಗ್ಲ
ಭಾಷೆ, ಚಲನಶೀಲತೆ ಕಳೆದುಕೊಂಡ
ನುಡಿಯಾಗಿ ಕನ್ನಡವನ್ನು ನಮ್ಮ ಮನದಲ್ಲಿ
ಕಟ್ಟಿಕೊಂಡಿದ್ದೇವೆ. ಆದರೆ ಇಲ್ಲಿ
ಗಮನಿಸಬೇಕಾದ ಅಂಶವೆಂದರೆ ತಾಂತ್ರಿಕ
$\frac{1}{2}$ ಪ್ರಾವೀ/ಣ್ಯತೆಗೂ ಭಾಷೆಗೂ ನೇರವಾದ ನಂಟೇ
ಇಲ್ಲ. ಗಣಿತ ಮತ್ತು ವಿಜ್ಞಾನ ವಿಷಯಗಳು
ಮಾಹಿತಿ ಪ್ರಧಾನ ಆಗಿರುವುದಕ್ಕಿಂತ ಪರಿಕಲ್ಪನೆ
ಪ್ರಧಾನವಾಗಿರುತ್ತವೆ. ಇವುಗಳ ಕಲಿಕೆಗೂ
ಕಲಿಯುವ ಭಾಷೆಗೂ ನಂಟಿರುವುದಿಲ್ಲ.
$\frac{3}{4}$ ವಿ/ದ್ಯೆ ಬೇರೆ, ಉದ್ಯೋಗವೇ ಬೇರೆ. ಪ್ರತಿವರ್ಷ
ದೇಶದಲ್ಲಿ ಹದಿನೈದು ಲಕ್ಷ ಎಂಜಿನಿಯರ್‌ಗಳು
ಹೊರ ಬರುತ್ತಿದ್ದಾರೆ. ಆದರೆ ನಾಲ್ಕು
ಲಕ್ಷಮಂದಿಗೆ ಮಾತ್ರ ಅವರ ಓದಿಗೆ ತಕ್ಕ
ಕೆಲಸ ಸಿಗುತ್ತಿದೆ. ಇವೆಲ್ಲರಿಗೂ ಆಂಗ್ಲ ಭಾಷೆ
ಗೊXತ್ತು. ಭಾಷೆ ಕಲಿಕೆಯೊಂದರಿಂದಲೇ 3
ಉದ್ಯೋಗಾವಕಾಶಗಳು ಲಭ್ಯ ಎಂದರೆ
ಇವರೆಲ್ಲರೂ ಉನ್ನತ ಜೀವನ ನಡೆಸಬೇಕಾಗಿತ್ತು
ಅಲ್ಲವೇ? ಆದರೆ ಉದ್ಯೋಗ ಮಾರುಕಟ್ಟೆ
ಇವರನ್ನು ಅಕುಶಲಿಗಳು ಎಂದೇ
ವ್ಯಾಖ್ಯಾನಿಸುತ್ತದೆ. ಭಾಷೆ/ಗೂ ಮೀರಿದ $\frac{1}{4}$
ತಾಂತ್ರಿಕ ಪರಿಣತಿ, ಬುದ್ಧಿಮತ್ತೆಯನ್ನು ಅದು
ಅಪೇಕ್ಷಿಸುತ್ತಿದೆ. ಭಾಷೆ–ಶಿಕ್ಷಣ–ಉದ್ಯೋಗ
ಎಂಬ ಈ ವೃತ್ತದಿಂದ ಆಚೆಗೆ ಬಂದರೆ ಮಾತ್ರ
ಮಾತೃಭಾಷೆಯ ಮಹತ್ವವನ್ನು ಅರಿಯಲು
ಸಾಧ್ಯವಾಗುತ್ತದೆ. ಹಾಗೆಂದು ಭಾಷೆಯ
ಪಾ/ತ್ರವನ್ನು ನಗಣ್ಯಗೊಳಿಸಲಾಗದು. ಆದರೆ $\frac{1}{2}$
ಬುದ್ಧಿಮತ್ತೆ ಮತ್ತು ಕೌಶಲ್ಯವಿದ್ದಾಗ ಭಾಷಾ
ಸಾಮರ್ಥ್ಯ ಪೋಷಕ, ಪ್ರೇರಕವಾಗಿ ಕೆಲಸ
ಮಾಡುತ್ತದೆ.

ಬಹುಭಾಷೆ ಕಲಿಕೆಯೆಂಬುದು ಈಗ
ಜಾಗತಿಕ ಹೋರಾಟ. ಅಭಿವೃದ್ಧಿ ಹೊಂದಿದ
ದೇಶ/ಗಳಲ್ಲೂ ಇಂಥ ಒಲವು ವ್ಯಾಪಕವಾಗಿ $\frac{3}{4}$
ಕಾಣಿಸುತ್ತಿದೆ. ಜಾಗತೀಕರಣವೆಂಬುದು
ಜನರನ್ನು, ದೇಶಗಳನ್ನು ಹತ್ತಿರಕ್ಕೆ ತಂದಿದೆ.
ಬಹುರಾಷ್ಟ್ರೀಯ ಕಂಪನಿಗಳು ಎಲ್ಲೆಡೆ
ಜಾಚಿಕೊಳ್ಳುತ್ತಿವೆ. ಇಂಥ ಸಂದರ್ಭಗಳಲ್ಲಿ
ಬಹುಭಾಷಿಕX ಜ್ಞಾನವೆಂಬುದು ವರದಾನ 4
ವಾಗುತ್ತದೆ. ಇದೆಲ್ಲವೂ ವ್ಯವಹಾರಿಕ ನೆಲೆ.
ಆದರೆ ಭಾಷೆಯೊಂದಕ್ಕೆ ಇದಕ್ಕೂ ಮೀರಿದ
ಸಾಂಸ್ಕೃತಿಕ ನೆಲೆ ಕೂಡ ಇರುತ್ತದೆ. ಅದು ನಮ್ಮ
ಉಸಿರು. ನಂಬಿಕೆ ಮತ್ತು ಶಕ್ತಿಯಾಗಿರುತ್ತದೆ.
ಮಗುವೊಂದು ತನ್ನ/ ಮೊದಲ ನಂಟನ್ನು $\frac{1}{4}$
ತಾನು ಮಾಡುವ ಮತ್ತು ಕೇಳುವ ಶಬ್ದದಿಂದ

ಸ್ಥಾಪಿಸಿಕೊಳ್ಳುತ್ತದೆ. ಜೀವನ ವಿಧಾನ
ನಡವಳಿಕೆಗಳನ್ನು ಮಾತೃಭಾಷೆಯಿಂದಲೇ
ಕಲಿತುಕೊಳ್ಳುತ್ತದೆ. ಭಾಷೆಯೊಂದು ಜೀವನ
$\frac{1}{2}$ ವಿಧಾನವಾಗುವ ಚೋದ್ಯವಿದು. ಈ ಆತ್ಮ/
ಸಾಂಗತ್ಯಕ್ಕೆ ನಾವು ಎರವಾಗುತ್ತಿದ್ದೇವೆ. ನಮ್ಮ
ಮಕ್ಕಳು ದೂರವಾಗುತ್ತಿದ್ದಾರೆ. ಭಾಷಾ
ತಬ್ಬಲಿತನದ ಅಪಾಯಗಳ ಕುರಿತು
ಮಾಧ್ಯಮಗಳು, ಸರಕಾರ, ಬುದ್ಧಿಜೀವಿ
ವಲಯ ತೀವ್ರವಾಗಿ ಚಿಂತಿಸಬೇಕು. ಬದಲಾದ
$\frac{3}{4}$ ಪರಿಸರ/ದಲ್ಲಿ ಕನ್ನಡವನ್ನು ವೈಯಕ್ತಿಕ ಮಟ್ಟದಲ್ಲಿ.
ಸಾಮುದಾಯಿಕವಾಗಿ, ಆಡಳಿತದಲ್ಲಿ
ಪ್ರಬಲವಾಗಿ ಕಟ್ಟಿಕೊಳ್ಳಬೇಕು. ಕನ್ನಡದ ಕುರಿತು
ಎಲ್ಲರಲ್ಲೂ ವಿಶ್ವಾಸವನ್ನು ಮೂಡಿಸಬೇಕು.

ಹಿಂದಿನ ಲೋಕಸಭೆ ಚುನಾವಣೆಯಲ್ಲಿ
5 ಹೀನಾXಯ ಸೋಲುಂಡ ಕಾಂಗ್ರೆಸ್ ಪಕ್ಷ,
ಮುಂಬರುವ ಮಹಾ ಚುನಾವಣೆ ಎದುರಿಸಲು
ಪರಿಣಾಮಕಾರಿ ಬ್ರಹ್ಮಸೂತ್ರಕ್ಕಾಗಿ ಹುಡುಕಾಟ
ನಡೆಸಿದೆ. ನರೇಂದ್ರ ಮೋದಿಯವರಂಥ ಪ್ರಭಾವಿ
ನಾಯಕರ ವಿರುದ್ಧ ಸೆಣಸಲು ಹಸ್ತಪಾಳಯಕ್ಕೆ
$\frac{1}{4}$ ಅಂತ/ದ್ದೊಂದು ಗಟ್ಟಿ ಸೂತ್ರದ ಅಗತ್ಯ ಇದೆ.
ಸದ್ಯದ ಮಾಹಿತಿಗಳ ಪ್ರಕಾರ, ಪೈಪೋಟಿಗೆ
ಅನಿವಾರ್ಯ ಎನಿಸಿರುವ ಆ ಸೂತ್ರ
ಶೋಧಿಸುವಲ್ಲಿ ಕಾಂಗ್ರೆಸ್ ನಾಯಕರು ಒಂದು
ಮಟ್ಟಿನ ಯಶಸ್ಸು ಸಾಧಿಸಿದ್ದಾರೆ ಎಂದು
$\frac{1}{2}$ ಮೂಲಗಳು ತಿಳಿಸಿವೆ. ಕಳೆ/ದ ಲೋಕಸಭೆ
ಚುನಾವಣೆ ಸೆಣಸಿನ ಅಖಾಡದಲ್ಲಿ ಡಿಜಿಟಲ್
ತಂತ್ರಜ್ಞಾನವೇ ನಿರ್ಣಾಯಕ ಪಾತ್ರವಹಿಸಿತ್ತು.
ಈ ಆಧುನಿಕ ಅಸ್ತ್ರದ ಮಹತ್ವವನ್ನು
ಎಲ್ಲರಿಗಿಂತಲೂ ಮೊದಲು ಅರ್ಥ
ಮಾಡಿಕೊಂಡವರು ಬಿಜೆಪಿ ನಾಯಕರು./ $\frac{3}{4}$
ಫೇಸ್‌ಬುಕ್‌ನಿಂದ ಹಿಡಿದು ಸಣ್ಣಪುಟ್ಟ ಎಲ್ಲಾ
ಆನ್‌ಲೈನ್ ತಾಣಗಳನ್ನು ಬಳಸಿಕೊಂಡು
ಪ್ರಚಾರ ನಡೆಸಿತ್ತು. ಆಗ ಪ್ರತಿ ಪಾಳಯಕ್ಕೆ ಇದರ
ತಾಕತ್ತೇನು ಎನ್ನುವುದು ಅರ್ಥವೇ ಆಗಿರಲಿಲ್ಲ.
ಗ್ರಾಮೀಣ ಮತದಾರರೇ ಹೆಚ್ಚಿರುವX 6
ಭಾರತದಲ್ಲಿ ಆನ್‌ಲೈನ್ ಪ್ರಚಾರ ಅಷ್ಟು ಯಶಸ್ಸು
ಕಾಣದು ಎನ್ನುವ ಉದಾಸೀನ ಕಾಂಗ್ರೆಸ್‌ನಲ್ಲೂ
ಇತ್ತು. ಆದರೆ ಅಂತಿಮವಾಗಿ ಫಲಿತಾಂಶ
ಪ್ರಕಟಗೊಂಡಾಗಲೇ ಆನ್‌ಲೈನ್ ಸೃಷ್ಟಿಸಿದ
ಜಾದೂ ಎಂಥದ್ದೆನ್ನುವುದರ ಅರಿವು ಆ/ ಪಕ್ಷಕ್ಕೆ $\frac{1}{4}$
ಮೂಡಿತ್ತು. ಮೋದಿಯವರು ಸಾಧಿಸಿ
ತೋರಿಸಿದ ಬಳಿಕ ಆನ್‌ಲೈನ್ ಮಹಿಮೆ
ಏನು ಎನ್ನುವುದು ಕಾಂಗ್ರೆಸ್‌ಗೆ ಅರ್ಥವಾಗಿದೆ.
ಅದಕ್ಕಾಗಿ ಮುಂಬರುವ ಲೋಕಸಭೆ ಚುನಾವಣೆ
ಎದುರಿಸಲು ಆನ್‌ಲೈನ್ ಸಮರಾಭ್ಯಾಸ
ನಡೆ/ಸಿದೆ. ಅದಕ್ಕಾಗಿ ಕೇಂಬ್ರಿಜ್ $\frac{1}{2}$
ಸಂಸ್ಥೆಯೊಂದಿಗೆ ಜತೆ ಸಂಧಾನ ನಡೆಸಿದೆ. ಈ
ಸಂಸ್ಥೆಯ ಮುಖ್ಯಾಧಿಕಾರಿಗಳು ಈಗಾಗಲೇ
ಕಾಂಗ್ರೆಸ್ ನಾಯಕರ ಜತೆ ಹಲವು ಸುತ್ತಿನ
ಮಾತುಕತೆ ಕೂಡ ಮುಗಿಸಿದ್ದಾರೆ. ತಾನು
ರೂಪಿಸುವ ಗೆಲುವಿನ ಸೂ/ತ್ರ ಯಾವ $\frac{3}{4}$
ವಿಧಾನದ್ದು ಎನ್ನುವುದನ್ನು ಈ ಸಂಸ್ಥೆ ಪ್ರಾತ್ಯಕ್ಷಿಕೆ
ಮೂಲಕ ಕಾಂಗ್ರೆಸ್ ನಾಯಕರಿಗೆ ಮನವರಿಕೆ
ಮಾಡಿಕೊಟ್ಟಿದೆ ಎಂದು ಮೂಲಗಳು ತಿಳಿಸಿವೆ.
ಖುದ್ದು ರಾಹುಲ್ ಗಾಂಧಿ ಕೂಡ ಈ ಪ್ರಚಾರ
ತಂತ್ರದ ಪರಿ ಅರ್ಥ ಮಾಡಿಕೊಳ್ಳಲುX 7
ಯತ್ನಿಸುತ್ತಿದ್ದಾರಂತೆ. ದೇಶದ ವಿವಿಧ ಜನ
ವರ್ಗಗಳ ಆಸೆ, ಆಕಾಂಕ್ಷೆಗಳೇನು ಎನ್ನುವುದು
ಅರ್ಥ ಮಾಡಿಕೊಂಡರೆ, ಅದಕ್ಕೆ ಪೂರಕವಾಗಿ

ಪರಿಣಾಮಕಾರಿ ರಣತಂತ್ರ ರೂಪಿಸುವುದು
ಸುಲಭ ಎನ್ನುವ ಪ್ರಜ್ಞೆ ಈಗ ಎಲ್ಲಾ
$\frac{1}{4}$ ನಾಯ/ಕರಲ್ಲೂ ಜಾಗೃತಗೊಂಡಿದೆ. ಸಾಮಾಜಿಕ
ಜಾಲತಾಣಗಳ ಬಗ್ಗೆ ಪ್ರಧಾನಿ ನರೇಂದ್ರ
ಮೋದಿಯವರಿಗೆ ಬಹುದೊಡ್ಡ ವಿಶ್ವಾಸ ಇದೆ.
ಯುವ ಪೀಳಿಗೆಯ ಮನವೊಳಿಕೆಗೆ ಆನ್‌ಲೈನ್
$\frac{1}{2}$ ಪ್ರಚಾರ ಸೂಕ್ತ ಅಸ್ತ್ರ ಎನ್ನುವುದನ್ನು ಎಲ್ಲರಿಗಿಂತ/
ಮೊದಲು ಅರ್ಥ ಮಾಡಿಕೊಂಡವರು ಮೋದಿ.
ಈ ಕ್ಷೇತ್ರದಲ್ಲಿ ಅವರನ್ನು ಮೀರಿಸುವ
ಇನ್ನೊಬ್ಬ ರಾಜಕಾರಣಿ ಸದ್ಯಕ್ಕಿಲ್ಲ. ಎಲ್ಲರೂ
ಸಾಂಪ್ರದಾಯಿಕ ಹಳೆ ಪ್ರಚಾರ ತಂತ್ರಗಳನ್ನು
ನೆಚ್ಚಿ ಸೆಣಸುತ್ತಿದ್ದಾಗ, ಮೋದಿಯುವರು
$\frac{3}{4}$ ಆನ್‌ಲೈನ್ ಬಳ/ಸಿ ಸ್ಮಾರ್ಟ್ ಪ್ರಚಾರ ನಡೆಸಿ
ಯಶಸ್ವಿಯಾದರು ಎಂದು ರಾಜಕೀಯ
ಪಂಡಿತರು ವಿಶ್ಲೇಷಿಸಿದ್ದಾರೆ. ಆನ್‌ಲೈನ್ ಪ್ರಸ್ತಾಪ
ಬಂದರೆ ಈಗಲೂ ಮೋದಿಯವರು ಉಳಿದ
ನಾಯಕರಿಗಿಂತ ತುಂಬ ಮುಂದಿದ್ದಾರೆ.
8 ಇವರಿಗೆ ತಕ್ಕ ರೀತಿಯಲ್ಲಿ ಪXಕ್ಷದ ಅಧ್ಯಕ್ಷ
ಅಮಿತ್ ಶಾ ಸಾಥ್ ನೀಡುತ್ತಿರುವುದು ಬಿಜೆಪಿಗೆ
ಬಹುದೊಡ್ಡ ಬಲ ತಂದುಕೊಟ್ಟಿದೆ. ಈ
ಹಿನ್ನೆಲೆಯಲ್ಲಿ ಮುಂಬರುವ ಲೋಕಸಭೆ
ಚುನಾವಣೆ ರಾಜಕೀಯ ಪಕ್ಷಗಳ ನಡುವಿನ
$\frac{1}{4}$ ಬಿರುಸಿನ ಸೈಬರ್ ಸಮರಕ್ಕೆ ದಾರಿ/
ಮಾಡಿಕೊಡಲಿದೆ ಎಂದು ಅಂದಾಜಿಸಲಾಗಿದೆ.

ಅಂತಿಮವಾಗಿ ನಮ್ಮ ಸರ್ಕಾರವು ತಮ್ಮ
ಸಂಪನ್ಮೂಲಗಳಿಗೆ ತಕ್ಕಂತೆ ನೌಕರರ ಹಿತಕ್ಕೆ
ಸಹಾನುಭೂತಿ, ಹಾಗೂ ಗಮನವನ್ನು ಸದಾ
ನೀಡಿದ್ದಾರೆ. ವೇತನ ಪ್ರಮಾಣಗಳನ್ನು
$\frac{1}{2}$ ತುಟ್ಟಿಭ/ತ್ಯ, ನಗರ ಪರಿಹಾರ ಭತ್ಯ ಮತ್ತು
ಮನೆಬಾಡಿಗೆ ಭತ್ಯಗಳ ವಿಚಾರವಾಗಿ ವೇತನ
ಆಯೋಗದ ಸಲಹೆಗಳನ್ನು ಕಾರ್ಯಗತ
ಮಾಡುವ ನಿರ್ಧಾರ ಕೈಗೊಂಡಿದ್ದರೂ ಸಹ ಈ
ನಿಮಿತ್ತವಾಗಿ ರಾಜ್ಯ ಸರ್ಕಾರಗಳ ಆರ್ಥಿಕ
ಹೊರೆ/ ಹೆಚ್ಚಾಗದಂತೆ ನೋಡಿಕೊಳ್ಳುವ ಬಗ್ಗೆ $\frac{3}{4}$
ಸಮಗ್ರ ರಾಷ್ಟ್ರಕ್ಕೆ ಅನ್ವಯಿಸತಕ್ಕ ಸೂಕ್ತ ಕಾರ್ಯ
ನೀತಿಯನ್ನು ಅಳವಡಿಸಿಕೊಳ್ಳಬೇಕೆಂದು
ಏಳನೆಯ ಆರ್ಥಿಕ ಆಯೋಗಕ್ಕೂ ಒತ್ತಾಯ
ಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ.
ಕೊನೆಯದಾಗಿX ಇದುವರೆಗೆ ಕೈಗೂಡಿದ 9
ಸಾಧನೆಗಳನ್ನು ಉಳಿಸಿಕೊಳ್ಳುವುದಕ್ಕೆ ಅಲ್ಲದೇ
ಒಳ್ಳೆಯ ಭವಿಷ್ಯ ಬರುವುದೆಂಬ ಆಸೆಯನ್ನು
ಕುದುರಿಸುವುದಕ್ಕೂ ಸಹ ಅತ್ಯವಶ್ಯವಾದ
ಯೋಜನೆಗಳಿಗೆ ಕನಿಷ್ಠ ಪ್ರಮಾಣದ ಸರ್ಕಾರಿ
ವೆಚ್ಚಕ್ಕೆ/ ನಾವು ಅವಕಾಶ ಕಲ್ಪಿಸಬೇಕು. $\frac{1}{4}$
ದುಂದು ವೆಚ್ಚವನ್ನು ತಪ್ಪಿಸಲು ಸರ್ವ ಪ್ರಯತ್ನ
ಮಾಡಲಾಗುವುದೆಂದು ಈ ಸದನಕ್ಕೂ,
ನಮ್ಮ ಸರ್ಕಾರಕ್ಕೂ ನಾನು ಭರವಸೆ
ಕೊಡಬಲ್ಲೆ. ಈ ಆಯುವ್ಯಯ ಪತ್ರದ
ಸಲಹೆಗಳನ್ನು ತಾವು ಸಾವಧಾನವಾ/ಗಿ $\frac{1}{2}$
ಪರಿಶೀಲಿಸಿದಲ್ಲಿ ಯೋಜನೇತರ ಮತ್ತು
ಅನುತ್ಪಾದಕ ಕಾರ್ಯಗಳ ವೆಚ್ಚ ಮಾಡಿರುವ
ಹಣ ವ್ಯವಸ್ಥೆ ಕೇವಲ ಕನಿಷ್ಠ ಪ್ರಮಾಣದ್ದೆಂಬ
ಅಂಶ ತಮಗೆ ಮನದಟ್ಟಾಗುವುದು. ಈ
ವರ್ಷದ ಆಯವ್ಯಯದಲ್ಲಿ ಅಂದಾಜುಗಳನ್ನು
ಪ/ರಿಶೀಲಿಸಿ, ಅವಶ್ಯವಿರುವ ಯೋಜನೆ ಮತ್ತು $\frac{3}{4}$
ಯೋಜನೇತರ ವೆಚ್ಚಗಳನ್ನು ಅನುಮೋದಿಸ
ಬೇಕೆಂದು ಕೋರುತ್ತೇನೆ. ಇಷ್ಟು ಹೊತ್ತು
ಮಾತನಾಡಲು ಅವಕಾಶ ಕೊಟ್ಟ ಎಲ್ಲರಿಗೂ
ಧನ್ಯವಾದ ತಿಳಿಸಿ ತಮ್ಮ ಮಾತುಗಳನ್ನು
ಮುಗಿಸಿದರು.X 10